145

ವಿದ್ಯಾಭ್ಯಾಸದ ಇಲಾಖಾ.

ತಾರೀಖು 17ನೇ ಜನವರಿ 1890ನೇ ಇಸವಿ.

ಮೈಸೂರು ದೇಶೀಯ ಪರೀಕ್ಷೆ.

ಮೈಸೂರು ದೇಶೀ ಪರೀಕ್ಷೆಯು ಪ್ರತಿ ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರ್ ಅಂದರೆ ಪ್ರಮುಖ ಸ್ಥಳದ ಸರ್ಕಾರೀ ಕಾಲೀಜ್ ಅಥವಾ ಹೈ ಸ್ಕೂಲಿನಲ್ಲಿ ನಡಿಸಲ್ಪಡುವದು. ಸದರೀ ಪರೀಕ್ಷೆಯು ಸ್ರ 1890ನೇ ಇಸವಿ ಫಿಬ್ರವರಿ ತಿಂಗಳು 17ನೇ ಸೋಮವಾರದ ದಿವಸ ಆರಂಭಿಸುತ್ತದೆ. ಪರೀಕ್ಷೆಯು ಇದರಡೀಕಂಡ ಕಾಲಕ್ರಮವಾಗಿ ನಡೆಸಲ್ಪಡುವದು.

ದಿವಸ.	ವಿದ್ಯಾರ್ಥಿಗಳ ಪರೀಕ್ಷೆ.		ಉಪಾಧ್ಯಾಯರ ಪರೀಕ್ಷೆ.	
	ಘಂಟೆ.	ಅಂಕಗಳು.	ಘಂಟೆ.	ಅಂಕಗಳು.
ಮೊದಲನೇ ದಿವಸ.	10ರಿಂದ 1ರ ವರಿಗೆ.	ಭಾಷಾ ಗ್ರಂಥ ವ್ಯಾಕರಣ (ಆವಶ್ಯಕ ಭಾಷೆ.)	10ರಿಂದ 1ರವರಿಗೆ	ಪದ್ಯಕಾವ್ಯ ವಾಕ್ಯವಿಭಜನೆ.
	2 „ 5 „	ಡಿಟೋ ಡಿಟೋ (ಎರಡನೇ ಭಾಷೆ)	2 „ 4 „ 4 „ 5 „	ವ್ಯಾಕರಣ. ವಾಕ್ಯರಚನೆ.
ಎರಡನೇ ದಿವಸ.	10ರಿಂದ 11ರ ವರಿಗೆ	ಬರವಣಿಗೆ ಅಕ್ಷರ ಸಂಯೋಜನ (ಆವಶ್ಯಕ ಭಾಷೆ)	10ರಿಂದ 1ರವರಿಗೆ	ಚರಿತ್ರೆ.
	11 „ 1 „ 2 „ 5 „	ಚರಿತ್ರೆ ಭೂಗೋಳ,ಭೂಪಟ ನಕ್ಷೆಬರಿಯುವಿಕೆ.	2 „ 4 „	ರೇಖಾಗಣಿತ.
ಮೂರನೇ ದಿವಸ.	10ರಿಂದ 12ರ ವರಿಗೆ 12 „ 1 „	ಅಂಕಗಣಿತ ಬರವಣಿಗೆ ಅಕ್ಷರಸಂಯೋಜನ-(ಎರಡನೇ ಭಾಷೆ)	10ರಿಂದ 1ರವರಿಗೆ 2 „ 4 „	ಅಂಕಗಣಿತ. ಬೀಜಗಣಿತ.
	2 „ 3 30 3. 30 5 „	ವ್ಯವಸಾಯಬೋಧಿನಿ ಆರೋಗ್ಯಬೋಧಿನಿ		
ನಾಲ್ಕನೇದಿವಸ.	10ರಿಂದ 11-30ವರಿಗೆ 11. 30 1 „ 2 3 30 3·30 5	ಕ್ಷೇತ್ರಗಣಿತ ಭಾಷಾಂತರ ಹೊಲಿಗೆ. ಪಾಕಶಾಸ್ತ್ರ)	10ರಿಂದ 1ರವರಿಗೆ 2 „ 5 „	ಭೂಗೋಳ. ಶಾಸ್ತ್ರಪಾಠ.
ಐದನೇ ದಿವಸ.	..	..	10ರಿಂದ 1ರವರಿಗೆ	ಪಾಠಶಾಲೆಯನ್ನು ನಡಿಸುವ ಕ್ರಮ.

ಇದರಡೀ ನಮೂದಿಸಲ್ಪಟ್ಟ ಅಂಕಗಳಿಗೆ ವಿದ್ಯಾರ್ಥಿಗಳು ಮುಖ್ಯವಾಗಿ ಗಮನವನ್ನು ಕೊಡತಕ್ಕದ್ದು.

1. ಪರೀಕ್ಷೆಯು ಆರಂಭಿಸುವದಕ್ಕೆ ಕ್ಲುಪ್ತವಾದ ಕಾಲ ಮೊದಲು ಅರ್ಧ ಘಂಟೆ ಆಗುವವರಿಗೂ ಪರೀಕ್ಷೆಯಾಗುವ.ಕೊಠಡಿಯನ್ನು ಬಿಡಲು ಯಾವ ದಿವಸದಲ್ಲಿಯಾಗಲಿ ಯಾವ ವಿದ್ಯಾರ್ಥಿಗೂ ಅಪ್ಪಣೆ ಕೊಡಲ್ಪಡುವದಿಲ್ಲ ಮತ್ತು ಅಂಥಾ ಅರ್ಧ ಘಂಟೆ ಕಳೆದ ಮೇಲೆ ಬರುವ ಯಾವ ವಿದ್ಯಾರ್ಥಿಗಳಿಗೂ ಪ್ರವೇಶಕ್ಕೆ ಅವಕಾಶ ಹುಟ್ಟಲಾರದು.

2. ಪರೀಕ್ಷೆ ಆಗುತ್ತಿರುವ ಕಾಲದಲ್ಲಿ ಪರೀಕ್ಷೆ ಕೊಠಡಿಯನ್ನು ಬಂದಾವರ್ತಿ ಬಿಟ್ಟು ಬಂದ ಅನಂತರ ಪುನಃ ಪ್ರವೇಶಿಸಲು ಯಾವ ವಿದ್ಯಾರ್ಥಿಗೂ ಅವಕಾಶ ವೊಂಟುಗಲಾರದು, ಅಲ್ಲದೆ ತನ್ನ ಉತ್ತರ ಕಾಗದಗಳನ್ನು ಸಂಪೂರ್ತಿಯಾಗಿ ಕೊಟ್ಟು ವಿನಹ ಪರೀಕ್ಷೆ ಸ್ಥಳವನ್ನು ಬಿಟ್ಟು ಬರುವದಕ್ಕೆ ಸಹ ಅವಕಾಶ ಕೊಡುವದಿಲ್ಲವು.

3. ಯಾವ ವಿದ್ಯಾರ್ಥಿಯೇ ಆಗಲಿ ಮತ್ತೊಬ್ಬ ವಿದ್ಯಾರ್ಥಿಯೊಡನೆ ಮಾತನಾಡುತ್ತಲಿದ್ದದ್ದಾಗಿಯಾಗಲಿ ಅಥವಾ ಇನ್ಯಾವ ವಿಧದಿಂದಲಾದರೂ ಬಳಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೂಡ್ಲೇ ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ಸಂಗತಿಯು ಡೈರೆಕ್ಟರ್ ಸಾಹೆಬರವರಿಗೆ ರಿಪೋರ್ಟು ಮಾಡಲ್ಪಡುವದು.

4. ಪರೀಕ್ಷೆ ಕೊಠಡಿಯೊಳಕ್ಕೆ ಸ್ಲೇಟುಗಳನ್ನಾಗಲಿ, ರೂಲರುಗಳನ್ನಾಗಲಿ, ಪುಸ್ತಕಗಳನ್ನಾಗಲಿ, ಬರದ ಕಾಗದಗಳನ್ನಾಗಲಿ, ಅಥವಾ ಇನ್ಯಾವ ವಿಧವಾದ ಕಾಗದಪತ್ರವನ್ನಾಗಲಿ ತೆಗದುಕೊಂಡು ಹೋಗಲು ಯಾವ ವಿದ್ಯಾರ್ಥಿಗೆಯೂ

ಅವಕಾಶಕೊಡಲ್ಪಡುವದಿಲ್ಲವು. ಯಾವ ವಿದ್ಯಾರ್ಥಿಯಾಗಲಿ, ಈನಿಬಂಧನೆಗೆ ವಿರುದ್ಧವಾಗಿ ನಡಕರಿಸುತ್ತಿರುವಲ್ಲಿಯಾಗಲಿ, ಅಥವಾ ಇನ್ಯಾವ ಅಕೃತ್ಯಗಳನ್ನು ನಡಿಸುತ್ತಿರುವಲ್ಲಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ನಡವಳಿತವು ಡೈರೆಕ್ಟರ್ ಸಾಹೆಬರವರಿಗೆ ರಿಪೋರ್ಟು ಮಾಡಲ್ಪಡುವದು.

5. ವಿದ್ಯಾರ್ಥಿಯು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಇದ್ದು ನಿಂತು ಸೂಪರ್ಟೆಂಡೆಂಟರು ಕಾಗದಗಳನ್ನು ಕೆಗದುಕೊಳ್ಳುವವರಿಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರೂ ಕೇಳಲಪೇಕ್ಷಿಸುವ ಯಾವ ವಿದ್ಯಾರ್ಥಿಯೇ ಆಗಲಿ ಮೇಲೆ ಹೇಳಿದ ರೀತಿ ನಡಿಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

6. ವಿದ್ಯಾರ್ಥಿಯು ಹೆಸರು ರೆಜಿಸ್ಟರ್ ನಂಬರ್ ಇವುಗಳನ್ನು ಬರೆಯದೇ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

7. ಪ್ರಶ್ನಾ ಕಾಗದಗಳು ಶಿವಾಯಿ ಯಾವ ಕಾಗದಗಳನ್ನಾಗಲಿ ಪರೀಕ್ಷೆ ಕೊಠಡಿಯಿಂದ ಹೊರಗೆ ತೆಗದುಕೊಂಡು ಹೋಗಲು ವಿದ್ಯಾರ್ಥಿಗಳಿಗೆ ಅಪ್ಪಣೆ ಕೊಡಲ್ಪಡುವದಿಲ್ಲ.

8. ವಿದ್ಯಾರ್ಥಿಗಳು ಕಾಗದಗಳನ್ನು ಹರಿಯದಂತೆಯೂ ಮತ್ತು ನೆಲದ ಮೇಲೆ ಕಾಗದಗಳನ್ನು ಬಿಸಾಡದಂತೆಯೂ ನಿಷೇಧಿಸಲ್ಪಟ್ಟಿರುತ್ತಾರೆ. "ವಿಷ್ಣು ಕಟ್ಟುಹೋದ ಕಾಗದ ವಗೈರೆಗಳು" ವಿದ್ಯಾರ್ಥಿಯು ಬಾಯುತ್ತಲಿದ್ದ ವೇಜಿಟೇಬಲೆಯೇ ಬಿಡಲ್ಪಡಬೇಕು.

ಎಸ್. ರೈಸ್,
ಎಜ್ಯುಕೇಷನ್ ಸೆಕ್ರಟರಿ.